Ex. No.39/2017
ಆರ್ ಡಬ್ಲು -3

ದಿನಾಂಕಃ 21-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ- ಡಿಹೆಚ್ ಆರ್ ಪರ ಶ್ರೀ. ಎ ಎ ಜಿ ವಕೀಲರಿಂದ.**

ನನ್ನ ಸ್ವಂತ ಊರು ಚೌಡಾಳ ಇರುತ್ತದೆ. ಈ ಪ್ರಕರಣವನ್ನು ಯಾರು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷ್ಯ ಪ್ರಮಾಣ ಪತ್ರ ನಾನು ಹೇಳಿ ಬರೆಸಿಲ್ಲ. ದರಖಾಸ್ತುದಾರರು ಹಾಗೂ ಪರಮೇಶ್ವರಪ್ಪ ಕುಂದಗೋಳ ಇವರ ಮಧ್ಯೆ ಏನು ವ್ಯವಹಾರ ಆಗಿರುತ್ತದೆ ಎಂದು ಗೊತ್ತಿಲ್ಲ. ಈ ದಿವಸ ನಾನು ಸಾಕ್ಷ್ಯ ನುಡಿಯಲು ನಿಂಗಪ್ಪ ಕುಂದಗೋಳ ಇವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನಿಂಗಪ್ಪ ಹಾಗೂ ಮಂಜುನಾಥ ಕುಂದಗೋಳ ಇವರು ಈ ಅರ್ಜಿಯಲ್ಲಿ ಏನು ಅರ್ಜಿ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅವರ ಮನೆತನದ ಹಿರೇತನ ಅವರೇ ಮಾಡುತ್ತಾರೆ ಎಂದರೆ ಸರಿ. ತೀರ್ಪುಋಣಿದಾರ ತನಗೆ ಬಂದ ಆಸ್ತಿಯ ಕಬ್ಜೆಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ಪರಮೇಶ್ವರಪ್ಪ ಇವರ ಕುಟುಂಬಕ್ಕೆ ಎಷ್ಟು ಜಮೀನುಗಳು ಇರುತ್ತವೆ ಎಂಬ ಬಗ್ಗೆ ಮಾಹಿತಿ ಇರುತ್ತದೆ. ಅವು ಸರ್ವೆ ನಂ. 15, ಕ್ಷೇತ್ರ 14 ಎಕರೆ 38 ಗುಂಟೆ. ಉಳಿದ ಆಸ್ತಿಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ 14 ಎಕರೆ 38 ಗುಂಟೆ ಜಮೀನನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನದ ಉತ್ತರಕ್ಕೆಃ ಸರ್ಕಾರಿ ರಸ್ತೆ, ದಕ್ಷಿಣಕ್ಕೆಃ ನಿಂಗಪ್ಪ ಕುಂದಗೋಳ ಇವರ ಜಮೀನು, ಪೂರ್ವಕ್ಕೆಃ ಸರ್ಕಾರಿ ರಸ್ತೆ, ಪಶ್ಚಿಮಕ್ಕೆಃ ಜಮೀನು ಇದ್ದು ಅದು ಯಾರದು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಬ್ಬ ಉಪ್ಪಿನ ಎಂಬುವವರು ಇರುತ್ತದೆ ಎಂದು ನುಡಿಯತ್ತಾರೆ. ಸದರಿ ಜಮೀನು ಈ ಹಿಂದೆ ಮಹಾದೇವಪ್ಪ ನಿಂಗಪ್ಪ ಕುಂದಗೋಳ ಎಂಬುವವರಿಗೆ ಸಂಬಂಧಿಸಿದ್ದು ಇತ್ತು. ಸದರಿ ಜಮೀನು ಈ ಹೊತ್ತಿಗೂ ಅವರ ಹೆಸರಿನಲ್ಲಿಯೇ ಇರುತ್ತದೆ. ಹಾಗೆ

ಅವರ ಹೆಸರಿನಲ್ಲಿ ಇರುವುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. 2017 ನೇ ಸಾಲಿನ ಪಹಣಿಯಲ್ಲಿ ಮಹಾದೇವಪ್ಪ ಇವರ ಸರಳ ವಾರಸುದಾರರ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿ. ಅವರ ಹೆಸರು ನೋಂದಾವಣೆ ಆಗುವ ಪೂರ್ವದಲ್ಲಿ ಪರಮೇಶ್ವರಪ್ಪ ಮಹಾದೇವಪ್ಪ ಕುಂದಗೋಳ ಇವರ ಹೆಸರು ಮಾತ್ರ ನಮೂದು ಇತ್ತು ಎಂದರೆ ಸರಿ. ಸದರಿ ಮಹಾದೇವಪ್ಪ ಇವರು ದರಖಾಸ್ತುದಾರರೊಂದಿಗೆ ಖರೀದಿ ಸಂಚಗಾರ ಮಾಡಿ 9 ಲಕ್ಷ ರೂಪಾಯಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆಗ ಸದರಿ ದರಖಾಸ್ತುದಾರರು ಹಾವೇರಿ ನ್ಯಾಯಾಲಯದಲ್ಲಿ ಅಸಲು ದಾವಾ ನಂ.75/2013 ದಾಖಲು ಮಾಡಿ ದಿನಾಂಕ 26-04-2017 ರಂದು ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಡಿಕ್ರಿ ಆದೇಶದ ಪ್ರಕಾರ ದರಖಾಸ್ತುದಾರರು 10 ಎಕರೆ ಜಮೀನಿಗೆ ಮಾಲೀಕರು ಎಂದು ಅವರ ಹೆಸರಿಗೆ ಪಹಣಿ ಸಹ ಬಂದಿರುತ್ತದೆ ಎಂದರೆ ಸರಿಯಲ್ಲ. ತೀರ್ಪುಋಣಿದಾರರಿಗೆ ಎಷ್ಟು ಆದಾಯ ಇತ್ತು ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ತೀರ್ಪುಋಣಿದಾರರು ಯಾರ ಹೊಲಗಳನ್ನು ಲಾವಣಿ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಈ ಅರ್ಜಿಯ ವಸ್ತುಸ್ಥಿತಿ ಗೊತ್ತಿಲ್ಲ ಆದರೂ ಸಹ ನಾನು ಮಂಜುನಾಥ ಮತ್ತು ನಿಂಗಪ್ಪ ಇವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಮಹಾದೇವಪ್ಪನಿಗೆ ಅವನ ಹಿರಿಯರಿಂದ ಬಂದ ಆಸ್ತಿ ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೀರ್ಪುಋಣಿದಾರರ ಮನೆಯ ಅಡಚಣೆ ನನಗೆ ಗೊತ್ತಿಲ್ಲದಿದ್ದರೂ ಸಹ ಅವರಿಗೆ ಯಾವುದೇ ಅಡಚಣೆ ಇರಲಿಲ್ಲ ಎಂಬುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Ex. No.39/2017
ಆರ್ ಡಬ್ಲು -3

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).